## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್‌ಗಳನ್ನು ವಿತರಿಸುವ ಬಗ್ಗೆ.

ಓದಲಾಗಿದೆ: 1. ನಿರ್ದೇಶಕರು ಅಂಗವಿಕಲರ ಕಲ್ಯಾಣ ಇಲಾಖೆ ಇವರ ಪತ್ರಸಂಖ್ಯೆ: ನಿಅಕಇ/ಯೋಜನೆ/14/ಬಸ್‌ಪಾಸ್/2003-2004/ದಿನಾಂಕ: 08-08-2003

2. ಸರ್ಕಾರದ ಸುತ್ತೋಲೆ ಸಂಖ್ಯೆ: ಮಮಅ/176/ಪಿಹೆಚ್‌ಪಿ/2003. ದಿನಾಂಕ: 16-10-2003.

### ಪ್ರಸ್ತಾವನೆ:

ಮಾನ್ಯ ಮುಖ್ಯಮಂತ್ರಿಗಳ 2001ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸರ್ಕಾರವು ರಾಜ್ಯದ 20,000 ತೀವ್ರತರವಾದ ದೈಹಿಕ ಅಂಗವಿಕಲರಿಗೆ ಉಚಿತ ಬಸ್‌ಪಾಸ್‌ಗಳನ್ನು ವಿತರಿಸುವುದಾಗಿ ಘೋಷಿಸಿದ್ದರು. ಅದರಂತೆ ಇವರುಗಳಿಗೆ ಬಸ್‌ಪಾಸ್‌ಗಳನ್ನು ವಿತರಿಸಲಾಗಿದೆ. ಅಂಧರು ಹಾಗೂ 20,000 ತೀವ್ರತರ ದೈಹಿಕ ಅಂಗವಿಕಲರನ್ನು ಹೊರತುಪಡಿಸಿ ಉಳಿದ ಅಂಗವಿಕಲರು ಸಹ ಬಸ್‌ಪಾಸ್‌ಗಳನ್ನು ನೀಡುವಂತೆ ಕೋರಿದ್ದಾರೆ. ಈ ಬಗ್ಗೆ ನಿರ್ದೇಶಕರು ಅಂಗವಿಕಲ ಕಲ್ಯಾಣ ಇಲಾಖೆ ಇವರು ಮೇಲೆ ಕ್ರಮಸಂಖ್ಯೆ (1) ರಲ್ಲಿ ಓದಲಾದ ಪತ್ರದೊಂದಿಗೆ ತೀವ್ರತರ ಅಂಗವಿಕಲರನ್ನು ಹೊರತುಪಡಿಸಿ ಉಳಿದ ಅಂಗವಿಕಲರಿಗೂ ಸಹ ರಿಯಾಯಿತಿ ದರದಲ್ಲಿ 50,000 ಬಸ್‌ಪಾಸ್‌ಗಳನ್ನು ವಿತರಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಸದರಿ ಪ್ರಸ್ತಾವನೆಯಂತೆ 50,000 ಬಸ್‌ಪಾಸ್‌ಗಳಿಗೆ ತಗಲುವ ವೆಚ್ಚ ರೂ. 8,25,00,000-00 ಆಗುತ್ತದೆ. ರಿಯಾಯಿತಿ ದರದಲ್ಲಿ ಬಸ್‌ಪಾಸ್ ನೀಡಲು ಭರಿಸಬೇಕಾದ ವೆಚ್ಚದ ಅನುಪಾತ ಈ ಕೆಳಗಿನಂತಿದೆ.

| | ರೂ.ಗಳಲ್ಲಿ |
|---|---|
| 1. ಅಂಗವಿಕಲ ಫಲಾನುಭವಿಗಳ ಪಾಲು ಶೇಕಡಾ - 15 | 1,23,75,000-00 |
| 2. ಸಾರಿಗೆ ಸಂಸ್ಥೆ ಪಾಲು ಶೇಕಡಾ - 25 | 2,06,25,000-00 |
| 3. ರಾಜ್ಯ ಸರ್ಕಾರದ ಪಾಲು ಶೇಕಡಾ - 60 | 4,95,00,000-00 |
| ಒಟ್ಟು | 8,25,00,000-00 |

ಅಂಗವಿಕಲ ವ್ಯಕ್ತಿಯು ತಾನು ವಾಸಿಸುವ ಪ್ರದೇಶದಿಂದ 100 ಕಿಲೋಮೀಟರ್ ವ್ಯಾಪ್ತಿಯೊಳಗೆ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಬಸ್‌ಪಾಸ್ ಸೌಲಭ್ಯ ಪಡೆಯಲು ಪ್ರತಿಯೊಬ್ಬರಿಗೆ ವಾರ್ಷಿಕ ರೂ. 1650-00 ವೆಚ್ಚ ತಗಲಲಿದ್ದು, ಅದರ ಶೇಕಡಾ 15 ರಷ್ಟನ್ನು ಅಂದರೆ ರೂ. 250-00 ಗಳ ಮೊತ್ತವನ್ನು ಆಯಾ ಜಿಲ್ಲೆಗೆ ಸಂಬಂಧಿಸಿದ ಸಾರಿಗೆ ಸಂಸ್ಥೆಯ ಡಿವಿಜನಲ್ ಕಂಟ್ರೋಲ್‌ರವರ ಹೆಸರಿನಲ್ಲಿ ಡಿ.ಡಿ. ಪಡೆದು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು ಈ ಬಸ್‌ಪಾಸ್‌ನ ಅವಧಿಯು ವಿತರಿಸಿದ ದಿನಾಂಕದಿಂದ ಒಂದು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ. ಉಳಿದಂತೆ ಬಸ್‌ಪಾಸ್ ನೀಡುವ ಬಗ್ಗೆ ಮೇಲೆ ಓದಲಾದ ದಿನಾಂಕ: 16-10-2003ರ ಸುತ್ತೋಲೆಯಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ.

ಮೇಲೆ ತಿಳಿಸಲಾದ ಅನುಪಾತದಂತೆ ಅಂಗವಿಕಲರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್ ವಿತರಿಸಲು ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಅ/176/ಪಿಹೆಚ್‌ಪಿ/2003/ಬೆಂಗಳೂರು. ದಿನಾಂಕ: 27-10-2003**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 50,000 ಅಂಗವಿಕಲರಿಗೆ ಈ ಕೆಳಕಂಡ ವೆಚ್ಚದ ಅನುಪಾತದ ಪ್ರಕಾರ ರಿಯಾಯಿತಿ ದರದಲ್ಲಿ ಬಸ್‌ಪಾಸ್‌ಗಳನ್ನು ನೀಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಒಬ್ಬ ಅಂಗವಿಕಲರಿಗೆ ವಾರ್ಷಿಕ ತಗಲುವ ವೆಚ್ಚ ರೂ. 1650-00

ಇದರಲ್ಲಿ 1. ಅಂಗವಿಕಲರ ಪಾಲು ಶೇಕಡಾ - 15

2. ಸಾರಿಗೆ ಸಂಸ್ಥೆಯ ಪಾಲು ಶೇಕಡಾ - 25

3. ರಾಜ್ಯ ಸರ್ಕಾರದ ಪಾಲು ಶೇಕಡಾ - 60

ಈ ವೆಚ್ಚವನ್ನು 2003-04ನೇ ಸಾಲಿನ ಲೆಕ್ಕ ಶೀರ್ಷಿಕೆ 3055-00-800-0-10 ಅಂಗವಿಕಲರಿಗೆ ಉಚಿತ ಬಸ್ ಪಾಸ್ ಸೌಲಭ್ಯ (ಯೋಜನೇತರ) ರಡಿ ಲಭ್ಯವಿರುವ ಅನುದಾನದಲ್ಲಿ ಭರಿಸುವುದು, ಮತ್ತು ಬಸ್‌ಪಾಸ್‌ಗಳ ವೆಚ್ಚವನ್ನು ರೂ. 4.98 ಕೋಟಿಗೆ ಮಿತಿಗೊಳಿಸತಕ್ಕದ್ದು. ಬಸ್‌ಪಾಸ್ ವಿತರಣೆಗೆ ಸಂಬಂಧಿಸಿದಂತೆ ಸುತ್ತೋಲೆ ಸಂಖ್ಯೆ: ಮಮಅಇ/176/ಪಿಹೆಚ್‌ಪಿ/2003 ದಿನಾಂಕ: 16-10-2003 ರಲ್ಲಿ ನೀಡಲಾದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲು ಸೂಚಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆ ಇ/1485/ವೆಚ್ಚ-3/03, ದಿನಾಂಕ: 25-10-2003 ರಲ್ಲಿ ನೀಡಲಾದ ಸಹಮತಿಯಂತೆ ಹಾಗೂ ದಿನಾಂಕ: 22-09-2003 ರಂದು ನಡೆದ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಯುಕ್ತ ಸಮಿತಿ ಸಭೆಯ ತೀರ್ಮಾನದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಪ.ದ. ಸಿದ್ಧಾಂತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕೇಂದ್ರ ಕಛೇರಿ, ಬೆಂಗಳೂರು

ಸಂ.ಕರಾಸಾ/ಕೇಕ/ಸಂ/ವಾ-2/2793/07-08 ದಿನಾಂಕ: 27-07-2007

## ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 596

(ಸಂಚಾರ (ವಾಣಿಜ್ಯ) ಶಾಖೆಯಿಂದ ಹೊರಡಿಸಲ್ಪಟ್ಟಿದೆ)

ವಿಷಯ: ಅಂಗವಿಕಲರಿಗೆ ರಿಯಾಯಿತಿ ದರದ ಬಸ್ ಪ್ರಯಾಣದ ಪಾಸ್ ವಿತರಿಸುವ ಬಗ್ಗೆ.

ಉಲ್ಲೇಖ: 1. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 539, ದಿ. 4-12-2003

2. ಸರ್ಕಾರಿ ಆದೇಶ ಸಂಖ್ಯೆ/ಸಾರಿಇ/43/ಸಾಸಂಇ/07 ದಿ. 14-05-07

ಕರಾರಸಾ ಸಂಸ್ಥೆಯು ತನ್ನ ಸಾಮಾಜಿಕ ಹೊಣೆಗಾರಿಕೆಯಲ್ಲಿ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಹಭಾಗಿತ್ವದಲ್ಲಿ ಉಲ್ಲೇಖ (1) ರಂತೆ 50,000 ಅಂಗವಿಕಲರಿಗೆ ರಿಯಾಯಿತಿ ದರದ ಬಸ್ ಪಾಸುಗಳನ್ನು ವಿತರಿಸಿರುತ್ತದೆ. ಉಲ್ಲೇಖ (2)ರ ಸರ್ಕಾರದ ಆದೇಶದಂತೆ ಸರ್ಕಾರವು ಎಲ್ಲಾ ಅರ್ಹ ಅಂಗವಿಕಲರಿಗೆ ಪಾಸುಗಳನ್ನು ವಿತರಿಸಬೇಕೆಂಬ ನಿರ್ಣಯವನ್ನು ಕೈಗೊಂಡಿರುತ್ತದೆ. ಈ ವಿಷಯವನ್ನು ಕರಾರಸಾ ಸಂಸ್ಥೆಯ ಮಂಡಳಿ ನಿರ್ದೇಶಕರ ಸಭೆಯಲ್ಲಿ ವಿವರವಾಗಿ ಚರ್ಚಿಸಿ, ಈ ವರ್ಷಕ್ಕೆ ಪಾಸ್‌ಗಳ ಸಂಖ್ಯೆಯನ್ನು ಒಂದು ಲಕ್ಷಕ್ಕೆ ಹೆಚ್ಚಿಸಲು ತೀರ್ಮಾನಿಸಿರುತ್ತದೆ. ಅರ್ಹ ಅಂಗವಿಕಲರನ್ನು ಗುರುತಿಸುವ ವಿಷಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸೇರಿದ್ದು, ಅವರು ಜಿಲ್ಲಾವಾರು ಗುರಿಯನ್ನು ಅನುಬಂಧದಲ್ಲಿರುವಂತೆ ತಿಳಿಸಿರುತ್ತಾರೆ. ಹಾಲಿ ಸಾರಿಗೆ ದರಗಳಿಗನುಗುಣವಾಗಿ ಒಂದು ಪಾಸ್‌ಗೆ ಒಂದು ವರ್ಷದ ವೆಚ್ಚ ರೂ. 2,240/- ಎಂದು ಅಂದಾಜಿಸಲಾಗಿದ್ದು, ಇದರ ನಾಲ್ಕನೇ ಒಂದು ಭಾಗ (1/4) ಅಂದರೆ ರೂ. 560/- ಮಾತ್ರ ಅಂಗವಿಕಲ

ಫಲಾನುಭವಿಗಳಿಂದ ಪಡೆದು ಪಾಸನ್ನು ವಿತರಿಸಲು ಮಂಡಳಿಯು ತೀರ್ಮಾನಿಸಿರುತ್ತದೆ. ಉಳಿದ ಭಾಗ ಸರ್ಕಾರ ಹಾಗೂ ಸಾರಿಗೆ ಸಂಸ್ಥೆಗಳು ಭರಿಸುತ್ತವೆ.

2. ಎಲ್ಲಾ ವಿಷಯಗಳನ್ನು ಪರಿಗಣಿಸಿ ಈ ಕೆಳಗಿನಂತೆ ನಿರ್ದೇಶನಗಳನ್ನು ನೀಡಲಾಗಿದೆ:

1. ಅರ್ಹ ಅಂಗವಿಕಲರಿಂದ ಬಸ್‌ಪಾಸ್‌ಗಾಗಿ ಅರ್ಜಿಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಅರ್ಜಿಗಳನ್ನು ಸ್ವೀಕರಿಸಿ, ಸಂಗ್ರಹಿಸಿ, ಪರಿಶೀಲಿಸಿ, ಸಂಸ್ಥೆಯ ವಿಭಾಗೀಯ ಕಛೇರಿಗೆ ಸಲ್ಲಿಸಿ, ಬಸ್‌ಪಾಸ್‌ನ್ನು ಪಡೆದು ಅಂಗವಿಕಲರಿಗೆ ವಿತರಿಸುವ ಜವಾಬ್ದಾರಿ ಅಂಗವಿಕಲರ ಕಲ್ಯಾಣ ಅಧಿಕಾರಿಗಳಿಗೆ ಸೇರಿರುತ್ತದೆ. ರಸ್ತೆ ಸಾರಿಗೆ ಸಂಸ್ಥೆಗಳು ಅಂಗವಿಕಲರ ಅರ್ಹತೆಗಳನ್ನು ಪರಿಶೀಲಿಸುವ ಅವಶ್ಯಕತೆ ಇರುವುದಿಲ್ಲ. ಪ್ರತಿ ಅರ್ಜಿಯೊಂದಿಗೆ ಆಯಾ ವಿಭಾಗೀಯ ನಿಯಂತ್ರಣಾಧಿಕಾರಿಯ ಹೆಸರಿಗೆ ಇರುವ ಸರಿಯಾದ ಮೊತ್ತದ ಡಿಡಿಯನ್ನು ಪಡೆಯಬೇಕು.

2. ಸರ್ಕಾರಿ ಉದ್ಯೋಗದಲ್ಲಿರುವ ಅಂಗವಿಕಲರು ಈ ರಿಯಾಯಿತಿ ಬಸ್‌ಪಾಸ್ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.

3. ಪಾಸ್‌ಗಳನ್ನು 31ನೇ ಡಿಸೆಂಬರ್ ತಿಂಗಳವರೆಗೆ ಮಾನ್ಯತೆ ಇರುವಂತೆ ವಿತರಿಸುವುದು. ಈ ವರ್ಷವು ಈಗಾಗಲೇ ಅರ್ಧ ಮುಗಿದಿರುವ ಪ್ರಯುಕ್ತ, ಡಿಸೆಂಬರ್ 2007ಕ್ಕೆ ಮುಕ್ತಾಯಗೊಳ್ಳುವ ವರ್ಷಕ್ಕೆ ರೂ. 250/-ರ ಡಿ.ಡಿ.ಯನ್ನು ಪಡೆದು ಪಾಸನ್ನು ವಿತರಿಸುವುದು. ಒಂದನೇ ಡಿಸೆಂಬರ್ 2007ರ ನಂತರ ಬಂದ ಅರ್ಜಿಗಳನ್ನು ಡಿಸೆಂಬರ್ 2008ರ ವರೆಗೆ ಮಾನ್ಯತೆಯಿರುವಂತೆ ಪ್ರತಿ ಬಸ್‌ಪಾಸ್‌ಗೆ ದರ ರೂ. 560/-ರ ಡಿ.ಡಿ.ಯನ್ನು ಪಡೆದು ಪಾಸನ್ನು ವಿತರಿಸಲು ಕ್ರಮ ಕೈಗೊಳ್ಳುವುದು.

4. ಪ್ರತಿ ತಿಂಗಳೂ 5ನೇ ತಾರೀಖಿನೊಳಗೆ ಹಿಂದಿನ ತಿಂಗಳು ವಿತರಿಸಿರುವ ಅಂಗವಿಕಲರ ರಿಯಾಯಿತಿ ಬಸ್‌ಪಾಸ್‌ಗಳ ಸಂಖ್ಯೆ ಹಾಗೂ ಹಿಂದಿನ ತಿಂಗಳ ಅಂತ್ಯದವರೆಗೆ ವಿತರಿಸಿದ ಒಟ್ಟು ಅಂಗವಿಕಲರ ಬಸ್‌ಪಾಸ್ ಸಂಖ್ಯೆಯನ್ನು ಕೇಂದ್ರ ಕಛೇರಿ ಕರಾರಸಾ ಸಂಸ್ಥೆ ಬೆಂಗಳೂರು ಇಲ್ಲಿಗೆ ನೀಡುವುದು.

5. ಅಂಗವಿಕಲರು ಬಸ್‌ಪಾಸನ್ನು ತೋರಿಸಿ ಬಸ್ಸಿನಲ್ಲಿ ಪ್ರಯಾಣಿಸುವಾಗ ಪಾಸ್ ಸಂಖ್ಯೆಯನ್ನು ನಿರ್ವಾಹಕರು ಮಾರ್ಗ ಪತ್ರದಲ್ಲಿ ದಾಖಲಿಸಬೇಕು.

6. ಅಂಗವಿಕಲರ ಬಸ್‌ಪಾಸಿನಲ್ಲಿ ಅಂಟಿಸಿರುವ ಭಾವಚಿತ್ರದ ಮೇಲೆ ಭಾವ ಚಿತ್ರದಲ್ಲಿರುವ ಮುಖ ಮರೆಯಾಗದಂತೆ ವಿಭಾಗೀಯ ನಿಯಂತ್ರಣಾಧಿಕಾರಿಗಳು ಸಹಿ ಮತ್ತು ಮೊಹರನ್ನು ಹಾಕಬೇಕು.

7. ವಿಭಾಗಗಳಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಂದ ಬಂದ ಅಂಗವಿಕಲರ ಅರ್ಜಿಗಳನ್ನು ಮಾತ್ರ ಸ್ವೀಕರಿಸುವುದು. ಅಂಗವಿಕಲರಿಂದ ನೇರವಾಗಿ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

8. ಅಂಗವಿಕಲರ ರಿಯಾಯಿತಿ ದರದ ಪಾಸನ್ನು ವಿತರಿಸುವ ಜಿಲ್ಲಾವಾರು / ವಿಭಾಗಾವಾರು ಗುರಿಯನ್ನು ಅನುಬಂಧದಲ್ಲಿ ತಿಳಿಸಿದ್ದು ಆಯಾ ಜಿಲ್ಲೆಗಳಿಗೆ ನಿಗದಿಪಡಿಸಿರುವ ಸಂಖ್ಯೆಯನ್ನು ಮೀರದಂತೆ ಅರ್ಜಿಗಳನ್ನು ಪಡೆದು ವಿಲೇವಾರಿ ಮಾಡುವುದು.

3. ಇನ್ನುಳಿದಂತೆ ಈಗಾಗಲೇ ಜಾರಿಯಲ್ಲಿರುವ ಉಲ್ಲೇಖ (1) ರಲ್ಲಿ ಸಮೂದಿಸಿರುವ ಸಾಮಾನ್ಯ ಸ್ಥಾಯಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಈ ಸಾಮಾನ್ಯ ಸ್ಥಾಯಿ ಆದೇಶವು ಈ ಕೂಡಲೇ ಜಾರಿಗೆ ಬರುತ್ತದೆ. ಇದರಂತೆ ಅರ್ಹ ಅಂಗವಿಕಲರಿಗೆ ಬಸ್‌ಪಾಸ್ ವಿತರಿಸಲು ಕೂಡಲೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

4. ವಿಭಾಗೀಯ ನಿಯಂತ್ರಣಾಧಿಕಾರಿಗಳು ಅಂಗವಿಕಲರ ರಿಯಾಯಿತಿ ದರದ ಪಾಸುಗಳನ್ನು ವಿತರಿಸುವಲ್ಲಿ ಹೆಚ್ಚಿನ ಉತ್ಸಾಹ ಹಾಗೂ ಆಸಕ್ತಿ ತೋರಿಸುವುದು ಮತ್ತು ಆದಷ್ಟು ತ್ವರಿತವಾಗಿ ಅಂಗವಿಕಲರ ರಿಯಾಯಿತಿ ಪಾಸನ್ನು ವಿಳಂಬ ಇಲ್ಲದೆ ವಿತರಿಸುವುದು.

5. ಈ ಸಾಮಾನ್ಯ ಸ್ಥಾಯಿ ಆದೇಶದ ಸ್ವೀಕೃತಿ ಮತ್ತು ಜಾರಿಗೊಳಿಸಿದ ಬಗ್ಗೆ ಅನುಸರಣಾ ವರದಿ ನೀಡುವುದು.

ಸಹಿ/-

ಉಪಾಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು:

ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ನಿರ್ದೇಶಕರು ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ ಗೋಪುರ ಬೆಂಗಳೂರು - 1 ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕರಾರಸಾಸಂಸ್ಥೆ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಮುಖ್ಯ ಸಂಚಾರ ವ್ಯವಸ್ಥಾಪಕರು, ವಾಕರಸಾಸಂಸ್ಥೆ, ಹುಬ್ಬಳ್ಳಿ/ಈಕರಸಾಸಂಸ್ಥೆ, ಗುಲ್ಬರ್ಗಾ, ಬೆಮಸಾಸಂಸ್ಥೆ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ.

ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕರಾರಸಾಸಂಸ್ಥೆ ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ

ಉಪಾಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕರಾರಸಾಸಂಸ್ಥೆ ಇವರ ಮಾಹಿತಿಗಾಗಿ.

ವ್ಯವಸ್ಥಾಪಕ ನಿರ್ದೇಶಕರ ಆಪ್ತ ಕಾರ್ಯದರ್ಶಿಗಳು, ಬೆಂಮಸಾಸಂಸ್ಥೆ/ವಾಕರಸಾಸಂಸ್ಥೆ/ಈಕರಸಾಸಂಸ್ಥೆ ಇವರ ಮಾಹಿತಿಗಾಗಿ

ಆಪ್ತ ಕಾರ್ಯದರ್ಶಿಗಳು ನಿರ್ದೇಶಕರು (ಸಿಬ್ಬಂದಿ ಮತ್ತು ಪರಿಸರ) / (ಭದ್ರತಾ ಮತ್ತು ಜಾಗೃತ), ಕರಾರಸಾಸಂಸ್ಥೆ ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ.